ಜಾರಿ ಅರ್ಜಿ ಸಂಖ್ಯೆ **29/2014**

ಕರಿಯಯ್ಯ
**ಪಿ.ಡಬ್ಲೂ-1**

**ದಿನಾಂಕ 19.10.2024 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರಿದ ಪಾಟೀ ಸವಾಲು **2** ರಿಂದ **4** ನೇ ತೀರ್ಪು ಋಣಿ ಪರ ಶ್ರೀ. ಬಿ ಎಸ್

**ವಕೀಲರವರಿಂದಃ**

ಅ ದಾ ಸಂ **129/2005** ರ ದಾವೆಯಲ್ಲಿ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ ನನಗೆ ಗೊತ್ತಿಲ್ಲ. ನಾನು ಈ ಜಾರಿ ಅರ್ಜಿಯನ್ನು ನಾನು ಯಾವ ಉದ್ದೇಶಕ್ಕಾಗಿ ದಾಖಲಿಸಿದ್ದೇನೆ ಎಂದು ನನಗೆ ಗೊತ್ತು. ಅ ದಾ ಸಂ **129/2005** ರಲ್ಲಿ ನಷ್ಟ ಪರಿಹಾರವನ್ನು ಕೊಡಬೇಕು ಎಂದು ತೀರ್ಪನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ತೀರ್ಪು ಋಣಿಗಳು ನಮಗೆ ರೂ **45,225/-** ಗಳನ್ನು ಕೊಡಬೇಕು ಎಂದು ಅ ದಾ ಸಂ **129/2005** ರಲ್ಲಿ ತೀರ್ಪನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ.

**2.** ಸೌಭಾಗ್ಯಮ್ಮ ಮತ್ತು ಗಾಯತ್ರಮ್ಮನವರು ನನ್ನ ವಿರುದ್ಧ ಈ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಿಭಾಗ ಕೋರಿ ಅ ದಾ ಸಂ **209/2014** ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಿನಾಂಕ **19.06.2024** ರಂದು ಈ ದಾವಾ ಸ್ವತ್ತುಗಳಲ್ಲಿ ಸೌಭಾಗ್ಯಮ್ಮ ಮತ್ತು ಗಾಯತ್ರಮ್ಮ, ತೀರ್ಪು ಋಣಿಗಳಿಗೆ ಭಾಗಾಂಶ ಕೊಡಬೇಕು ಎಂದು ತೀರ್ಪು ಮತ್ತು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ತೀರ್ಪು ಋಣಿಗಳಿಗೆ ತೊಂದರೆ ನೀಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ತೀರ್ಪು ಋಣಿಗಳು ಯಾವುದೇ ರೀತಿಯ ತೊಂದರೆ ನೀಡದೇ ಇದ್ದರೂ ಸಹಾ ನಾನು ಸುಳ್ಳು ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ತೀರ್ಪು ಋಣಿಗಳು ಯಾವುದೇ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುವುದಿಲ್ಲ, ನಾನೇ ಅವರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ತೀರ್ಪು ಧಣಿ ಪರ ವಿಚಾರಣೆ ಮುಂದುವರಿದ ವಿಚಾರಣೆ ಇಲ್ಲ ಎಂದು ವಕೀಲರು ನುಡಿದಿರುತ್ತಾರೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ